Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್. ಸಿ. 110/2021

ದಿನಾಂಕ ಃ 23.01.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 16 ಪಿ. ಡಬ್ಲ್ಯೂ: 13

| | |
|---|---|
| ಸಾಕ್ಷಿದಾರರ ಹೆಸರು | ಡಾ. ವಸಂತಲಕ್ಷ್ಮೀ ಎ ವಿ |
| ಗಂಡನ ಹೆಸರು | ಎಂ ಸಿ ವಿಶ್ವಾಸ್ |
| ವಯಸ್ಸು | 55 ವರುಷ |
| ಉದ್ಯೋಗ | ಹಿರಿಯ ತಜ್ಞ ವೈದರು , ಸಾರ್ವಜನಿಕ ಆಸ್ಪತ್ರೆ, ನಾಗಮಂಗಲ |
| ವಾಸ | ಮಂಡ್ಯ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ನಾನು 2013 ರಿಂದ ಇಲ್ಲಿಯವರೆಗೂ, ಮೇಲೆ ಹೇಳಿದ ವಿಳಾಸದಲ್ಲಿ ಹಿರಿಯ ತಜ್ಞ ವೈದ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ಈ ದಿವಸ ಸಾಕ್ಷಿ ನುಡಿಯಲು ನಾನು , ನಮ್ಮ ಆಸ್ಪತ್ರೆಯ ಎಂ ಎಲ್ ಸಿ ರಿಜಿಸ್ಟರ್ ನ್ನು ತಂದಿರುತ್ತೇನೆ.

2) ದಿಃ 06.08.2016 ರಂದು ಬೆಳಿಗ್ಗೆ 10.00 ಗಂಟೆಯಲ್ಲಿ ಅಫೀಜ್ ಉಲ್ಲಾ ಬಿನ್ ಮಹಮ್ಮದ್ ಅಮೀರ್, ಕುಂಬಾರ್ ಬೀದಿ ನಾಗಮಂಗಲ, 32 ವರ್ಷ ಆದ ಇವರು ಹೊಡೆದಾಟದ ಹಿನ್ನೆಲೆಯಲ್ಲಿ ಅವರ ಸಹೋದರರಾದ ಅಮ್ಮದ್ ಪಾಷ ರವರೊಂದಿಗೆ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿದ್ದರು. ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಕೆಳಕಂಡ ಗಾಯಗಳು ಕಂಡು ಬಂದಿದ್ದವು.

1) Lacerated would present form right lateral end of the frontal region, extend upwards to vertex about 8 x 7 C. M-suetured.

2) Tenderness present over back of fore arm with bruice, 4 x 4 C.m on left fore arm, fracture fore arm bone.

ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಆದಿಚುಂಚನಗಿರಿ ಮೆಡಿಕಲ್ ಸೈನ್ಸ್ ಕಾಲೇಜ್ ಗೆ ರೆಫರ್ ಮಾಡಲಾಯಿತು.

3) ದಿಃ 08.10.2017 ರಂದು ನಾಗಮಂಗಲ ಟೌನ್ ಪೊಲೀಸ್ ಠಾಣೆಯ ಪೇದೆಯವರು, ಗಾಯಾಳುವಿನ ಆಸ್ಪತ್ರೆಯ discharge summery ಯ certificate ನ್ನು ತಂದು ನಮ್ಮ ಆಸ್ಪತ್ರೆಗೆ ತಂದು ಕೊಟಪಿ್ಟದ್ದರು. ಇದರ ಆಧಾರದಲ್ಲಿ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಗಾಯದ ಪ್ರಮಾಣ ಪತ್ರವನ್ನು ನಿಪಿ.9 ಎಂದು, ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

4) ಮೇಲ್ಕಂಡ ಎರಡೂ ಗಾಯಗಳು, ತೀವ್ರ ಸ್ವರೂಪದ ಗಾಯಗಳು ಎಂದು ನನ್ನ ಅಭಿಪ್ರಾಯವನ್ನು ನೀಡಿರುತ್ತೇನೆ.

5) ಸದರಿ ಎರಡೂ ಗಾಯಗಳು, ಈಗ ನ್ಯಾಯಾಲಯದ ಮುಂದೆ ಇರುವ ಮುಮಾ.1 - ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆ.

6) ದಿಃ 18.11.2017 ರಂದು, ತನಿಖಾಧಿಕಾರಿಯವರು, ಗಾಯಾಳುವಿಗೆ ಆಗಿದ್ದ ಗಾಯಗಳ ಬಗ್ಗೆ ಅಭಿಪ್ರಾಯವನ್ನು ನೀಡುವಂತೆ ಕೋರಿ, ಒಂದು ಕಬ್ಬಿಣದ ರಾಡಿನೊಂದಿಗೆ ಮನವಿ ಪತ್ರವನ್ನು ಸಲ್ಲಿಸಿಕೊಂಡಿದ್ದರು. ಈಗ ಸದರಿ ಪತ್ರವನ್ನು ನೋಡುತ್ತಿದ್ದು, ಇದನ್ನು ನಿಪಿ.10 ಎಂದು ಗುರುತಿಸಲಾಯಿತು. ಅದರಲ್ಲಿ ಇರುವ ನನ್ನ ಸಹಿಯನ್ನು ನೋಡುತ್ತಿದ್ದು, ಅದನ್ನು ನಿಪಿ.10(ಎ) ಎಂದು ಗುರುತಿಸಲಾಯಿತು.

7) ಸದರಿ ಕಬ್ಬಿಣದ ರಾಡನ್ನು ನಾನು ಪರೀಕ್ಷಿಸಿ, ನಾನು ದಿಃ 18.11.2017 ರಂದು, ತನಿಖಾಧಿಕಾರಿಯವರಿಗೆ ವರದಿಯನ್ನು ಕೊಟ್ಟಿರುತ್ತೇನೆ. ನನ್ನ ವರದಿಯಲ್ಲಿ, ಸದರಿ ಕಬ್ಬಿಣದ ರಾಡಿನಿಂದ, ಹೊಡೆದರೆ ಅಥವಾ ಹಲ್ಲೆ ಮಾಡಿದರೆ ಗಾಯದ ಪ್ರಮಾಣ ಪತ್ರದಲ್ಲಿ ಹೇಳಿರುವ ಗಾಯಗಳು ಆಗುವ ಸಂಭವ ಇರುತ್ತದೆ ಎಂದು ಎಂದು ಅಭಿಪ್ರಾಯವನ್ನು ಕೊಟ್ಟಿರುತ್ತೇನೆ. ಈ ಪತ್ರವನ್ನು ಈಗ ನೋಡುತ್ತಿದ್ದು, ಇದರಲ್ಲಿ ಹಾಕಿರುವ ನನ್ನ ಎರಡೂ ಸಹಿಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.11 ಎಂದು, ಸಹಿಗಳನ್ನು ನಿಪಿ.11(ಎ)ಮತ್ತು ನಿಪಿ.11(ಬಿ) ಎಂದು ಗುರುತಿಸಲಾಯಿತು. ತನಿಖಾಧಿಕಾರಿಯವರು , ಮನವಿ ಪತ್ರದೊಂದಿಗೆ, ಹಾಜರು ಪಡಿಸಿದ್ದ ಕಬಿಬಣದ ರಾಡನ್ನು ಈಗ ನೋಡಿದರೆ ಗುರುತಿಸುತ್ತೇನೆ, ಸಾಕ್ಷಿಯು, ನ್ಯಾಯಾಲಯದ ಮುಂದೆ ಇರುವ ಮುಮಾ-1 ಕಬ್ಬಿಣದ ರಾಡನ್ನು ನೋಡಿ ಗುರುತಿಸಿರುತ್ತಾರೆ.

8) ನಮ್ಮ ಆಸ್ಪತ್ರೆಯ ಎಂ.ಎಲ್.ಸಿ ರಿಜಿಸ್ಟರ್ ನ ಆಧಾರದ ಮೇರೆಗೆ ನಾನು ಮೇಲಿನ ಸಾಕ್ಷಿಯನ್ನು ನುಡಿದಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಸಿ.ಆರ್. ವಕೀಲರಿಂದ ಃ**

1) ನಿಪಿ. 9 ಗಾಯದ ಪ್ರಮಾಣ ಪತ್ರದಲ್ಲಿ ಹಲ್ಲೆ ಮಾಡಿದ್ದ ಆರೋಪಿತರ ಹೆಸರುಗಳನ್ನು ನಿಖರವಾಗಿ ಬರೆದಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನುಡಿಯುತ್ತಾರೆ S/o. ಇಮ್ರಾನ್ and others ಅಂತ ಬರೆದಿದ್ದೇನೆ ಎಂದು. ನಿಪಿ.9 - ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ 06.08.2016 ಎಂಬ ದಿನಾಂಕದಲ್ಲಿ, 16 ಎಂಬ ಇಸವಿಯನ್ನು ತಿದ್ದಿ ಬರೆದಿದ್ದೇನೆ ಎಂದರೆ ಸಾಕ್ಷಿಯು, 17 ಅಂತ ನಾನು ಬರೆದಿದ್ದನ್ನು ತಿದ್ದಿ 16 ಎಂದು ಬರೆದಿರುತ್ತೇನೆ ಎಂದು ಉತ್ತರಿಸುತ್ತಾರೆ. ಅದೇ ರೀತಿ, ನಿಪಿ.9 - ಗಾಯದ ಪ್ರಮಾಣ ಪತ್ರದಲ್ಲಿ, 2 ನೇ ಗಾಯದಲ್ಲಿ ನಮೂದಿಸಿರುವ, 25.02.2016 ದಿನಾಂಕದಲ್ಲಿ 5 ನ್ನು ಮತ್ತು 2 ನ್ನು ತಿದ್ದಿ ಬರೆದಿದ್ದೇನೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯವನ್ನು ಕೋರಿರುತ್ತಾರೆ , ಯಾವುದೇ ಸಕಾರಣವನ್ನು ನೀಡದೇ ಇರುವುದರಿಂದ, ಕೋರಿಕೆಯನ್ನು ತಿರಸ್ಕರಿಸಲಾಯಿತು.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.